ಆಗುವುದರ ಒಳಗೇ ಅಪ್ಪ ಹೊಟೇಲಿನೆದುರು ನಿಂತಿದ್ದ. ನಾನು ಶಾಲೆಯಿಂದ ಬರುವಾಗ ಬಸ್ ನಿಲ್ದಾಣದ ಸಮೀಪ ನನ್ನನ್ನು ಆಕಸ್ಮಿಕವಾಗಿ ಗುರುತಿಸಿದ್ದ ನಮ್ಮ ಊರಿನ ಗೌಡರೊಬ್ಬರು ಊರಿಗೆ ಹೋದ ಬಳಿಕ ನಿಮ್ಮ ಹುಡುಗನನ್ನು ಸಿರಿಪುರದಲ್ಲಿ ಕಂಡ ಹಾಗಾಯಿತು, ಶಾಲೆಯಿಂದ ಮರಳಿ ಹೊಟೇಲೊಂದಕ್ಕೆ ಹೋದ ನೋಡಿ, ಅಂದರೆ ನಿಮ್ಮ ಮಗ ಆಗಿರಲಿಕ್ಕಿಲ್ಲ, ಯಾವುದಕ್ಕೂ ಒಮ್ಮೆ ಸಿರಿಪುರಕ್ಕೆ ಹೋಗಿ ಬನ್ನಿ ಎಂದರಂತೆ. ನನಗಾಗಿ ಶಿವಮೊಗ್ಗ, ಶಿಕಾರಿಪುರ ಮೊದಲ್ಗೊಂಡು ಬೆಂಗಳೂರವರೆಗು ಹೋಗಿ ಬಂದು ನನ್ನ ಆಸೆಯನ್ನೇ ಬಿಟ್ಟಿದ್ದ ಅಪ್ಪನಿಗೆ ಮರುಜೀವ ಬಂದು ಮರುದಿನವೇ ಓಡಿ ಬಂದಿದ್ದ. ಮುಂದಿನದೆಲ್ಲ ಯಾವತ್ತಿನ ಕತೆಯೇ. ಅಷ್ಟರಲ್ಲಿ ನನ್ನ ಅಹಂಕಾರವೂ ಅಳಿದಿತ್ತು. ಮಲ್ಲಾರಿ ಮೇಷ್ಟ್ರೂ ವರ್ಗವಾಗಿದ್ದರು. ಪ್ರತಿಭಾವಂತನೇ ಆಗಿದ್ದ ನನಗೆ ಮುಂದಿನ ಓದೂ ತೊಡಕಾಗಲಿಲ್ಲ...

ಆವತ್ತು ಒಳ್ಳೆಯ ಮನುಷ್ಯನಾಗಿ ನನ್ನನ್ನು ರೂಪಿಸಿದ ರಾಮಣ್ಣ ಇವತ್ತು ತನ್ನ ಬದುಕಿಗಾಗಿ ಒದ್ದಾಡುತ್ತಿದ್ದಾನೆ... ನಾನು ಅವನಿಗಾಗಿ ಏನು ಮಾಡಬಲ್ಲೆ?

ತಲೆ ಗೆದ್ದಲ ಗೂಡಾಗಿತ್ತು. ದೂರದಲ್ಲಿ ಪರಿಹಾರದ ಕಿರಣದ ಛಾಯೆ... ಹೌದು, ಹೀಗೇ ಮಾಡಬೇಕು... ಹೌದು... ಪ್ರಯತ್ನಿಸಬೇಕು...

★★★

ರಾಗುವಿನೊಂದಿಗೆ ಈ ಕುರಿತು ಸುದೀರ್ಘವಾಗಿ ಚರ್ಚಿಸಿದೆ. ನನ್ನ ಯೋಜನೆ ಹೀಗಿತ್ತು: ಮುಖ್ಯ ಕಚೇರಿಗೆ ಈ ಖಾತೆಯ ಕುರಿತು ಒಂದು ಕಾಂಪ್ರೊಮೈಸ್ ಪ್ರಪೋಸಲ್(ರಾಜಿ ಮನವಿ) ಕಳಿಸುವುದು. ಉದ್ಯಮ ತೀರಾ ನಷ್ಟದಲ್ಲಿ ನಡೆಯುತ್ತಿದೆ, ಗ್ರಾಹಕನಿಗೆ ಒಂದು ಗುಂಟೆ ಜಾಗ ಮತ್ತು ಅದರಲ್ಲಿ ಒಂದು ಚಿಕ್ಕ ಮನೆ ಬಿಟ್ಟರೆ ಬೇರೆ ಯಾವುದೇ ಆಸ್ತಿಯಿಲ್ಲ; ಆ ಮನೆಯನ್ನು ಹರಾಜು ಹಾಕಿದರು ಒಂದು ಲಕ್ಷಕ್ಕಿಂತ ಹೆಚ್ಚು ಈ ಊರಲ್ಲಿ ಬರುವುದಿಲ್ಲ ಎನ್ನುವ ವಿಚಾರವನ್ನು ಆಧಾರ ಸಹಿತ ನಮೂದಿಸಿ ಶಿಫಾರಸು ಮಾಡುವುದು. ನಾನೂ ನನ್ನ ತನಿಖಾ ವರದಿಯಲ್ಲಿ ಅದನ್ನು ನಮೂದಿಸುವುದು. ಅಸಲು ಮತ್ತು ಸ್ವಲ್ಪ ಬಡ್ಡಿಯನ್ನು ಗ್ರಾಹಕ ಕಟ್ಟಬೇಕಾಗಬಹುದು. ಅದು ಕನಿಷ್ಠ ಒಂದೂ ಕಾಲು, ಒಂದೂವರೆ ಲಕ್ಷಕ್ಕೆ ನಿಲ್ಲಬಹುದು. ರಾಮಣ್ಣನಿಗಂತು ಅಷ್ಟು ಹಣ ಕಟ್ಟಲು ಸಾಧ್ಯವೇ ಇಲ್ಲ. ಒಮ್ಮೆ ಸುಸ್ತಿದಾರನಾಗಿರುವ ಅವನ ಹೆಸರಿಗೆ ಬೇರೆ ಸಾಲ ಮಂಜೂರು ಮಾಡಲೂ ಬರುವುದಿಲ್ಲ. ಅದಕ್ಕಾಗಿ ಅವನ ಸಾಕು ಮಗನ ಹೆಸರಿಗೆ ರೋಜಗಾರ್ ಯೋಜನೆಯಡಿ ಮೂರು ಲಕ್ಷ ಸಾಲ ಮಂಜೂರು ಮಾಡುವುದು, ಸ್ವಂತ ಗ್ಯಾರೇಜು ಆರಂಭಿಸುವ ಸಲುವಾಗಿ. ಅದರಲ್ಲಿ ರಾಮಣ್ಣನ ಸಾಲವನ್ನು ಮೋಕಳಿಕೆ ಮಾಡಿ ಅವನ ಸಾಕು ಮಗನ ಜೀವನಕ್ಕೂ ಒಂದು ವ್ಯವಸ್ಥೆ ಮಾಡಿದ ಹಾಗಾಗುತ್ತದೆ; ಸರಕಾರದಿಂದ ಸಹಾಯಧನವೂ ದೊರೆಯುತ್ತದೆ... ಅದಕ್ಕೂ ಮುನ್ನ ರಾಮಣ್ಣನ ಖಾತೆಗೆ ಜೀವ ಬರಿಸಲು ಅವನಿಂದ ಪುನರುಜ್ಜೀವನ ಪತ್ರಕ್ಕೆ ಸಹಿ ಹಾಕಿಸಿಕೊಳ್ಳುವುದು ಮತ್ತು ಅವನಿಂದ ಕಾಂಪ್ರೊಮೈಸ್‌ಗೆ ಸಮ್ಮತಿ ಪಡೆಯುವ ಕೆಲಸ ಆಗಬೇಕಾಗಿತ್ತು. ಅದರ ಹೊಣೆಯನ್ನು ನಾನು ಹೊತ್ತುಕೊಂಡೆ. ನನ್ನ ಸ್ನೇಹಿತನ ಕೆರಿಯರ್‌ಗೆ ಬೀಳಲಿರುವ ಕಪ್ಪು ಚುಕ್ಕೆಯನ್ನು ತಪ್ಪಿಸುವುದಕ್ಕಿಂತ ಹೆಚ್ಚಾಗಿ ರಾಮಣ್ಣನ ಬದುಕಿಗೊಂದು ನೆಲೆಯನ್ನು ಕಲ್ಪಿಸುವುದು ನನ್ನ ಉದ್ದೇಶವಾಗಿತ್ತು.

ಮರುದಿನ ಸಂಜೆಯೇ ಹಣ್ಣು ಮತ್ತು ಸಿಹಿ ತಿಂಡಿಗಳ ಪೊಟ್ಟಣದೊಂದಿಗೆ ರಾಮಣ್ಣನ ಮನೆಗೆ ಹೋದೆ. ನನ್ನನ್ನು ಕಂಡಾಗ ಅಕ್ಕನ ಕಣ್ಣುಗುಡ್ಡೆಗಳ ಮೇಲಿನ ಆರ್ದ್ರತೆಯನ್ನು ಕಂಡಾಗ ಅವಳಿಗಾದ ಸಂತೋಷದ ಅರಿವಾಯಿತು. ನನ್ನನ್ನು ಕಂಡದ್ದಕ್ಕೆ ಮಾತ್ರವಲ್ಲ, ಆ ಕ್ಷಣಕ್ಕೆ ಅವಳಿಗೆ ತನ್ನ ಇಲ್ಲವಾದ ಮಗನ ನೆನಪೂ ಕಾಡಿರಬೇಕು ಎನ್ನಿಸಿ ತುಸು ಅಧೀರನಾದೆ. ಅವಳ ಮುಖ ನೋಡುವ